ಯೋಜನೆಗಳಿಗೆ ಇನ್ನೂ ಒಂದು ಯೋಜನೆಯನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಚಾಮರಾಜನಗರ ಜಿಲ್ಲೆಯನ್ನು ಕರ್ನಾಟಕ ಗೃಹ ಮಂಡಲಿ, ಕರ್ನಾಟಕ ರಾಜೀವ್ ಗಾಂಧಿ ವಸತಿ ಮತ್ತೆ ನಮ್ಮ ಕೊಳಚೆ ನಿರ್ಮೂಲನಾ ಮಂಡಲಿಯಲ್ಲಿ ಯಾವ್ಯಾವ ರೀತಿಯಲ್ಲಿ ಬಡವರಿಗೋಸ್ಕರವಾಗಿ ಮತ್ತು ಜಿಲ್ಲಾ ಕೇಂದ್ರವನ್ನು ಒಂದು ದೊಡ್ಡ ಜಿಲ್ಲಾ ಕೇಂದ್ರವನ್ನಾಗಿ ಮಾಡತಕ್ಕದ್ದಕ್ಕೆ ಎಲ್ಲಾ ತರಹದ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರ

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 8–3–2010ರ 7ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 66 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

5. ವರದಿಯನ್ನು ಒಪ್ಪಿಸುವುದು

ಶ್ರೀ ಎಂ.ಪಿ. ಕುಮಾರಸ್ವಾಮಿ (ಅಧ್ಯಕ್ಷರು, ಅನುಸೂಚಿತ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ): ಮಾನ್ಯ ಅಧ್ಯಕ್ಷರೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2009–10ನೇ ಸಾಲಿನ ಮೊದಲನೇ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

6. ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲು ಒತ್ತಾಯ

ವಿಷಯ: ಮೈಸೂರು ಪೇಪರ್ ಮಿಲ್‌ನಲ್ಲಿ ಶಾಸಕರಿಗೆ ಹಕ್ಕುಚ್ಯುತಿಯಾಗಿರುವ ಬಗ್ಗೆ

ಶ್ರೀ ಬಿ.ಕೆ. ಸಂಗಮೇಶ್ವರ: ಮಾನ್ಯ ಸಭಾಧ್ಯಕ್ಷರೆ, ಹಕ್ಕುಚ್ಯುತಿಯ ವಿಚಾರವನ್ನು ಪ್ರಸ್ತಾಪ ಮಾಡಲು ಲಿಖಿತ ಮುಖಾಂತರ ಕೊಡಿ ಎಂದು ಹೇಳಿದ್ದೀರಿ. ನಾನು ಕೊಟ್ಟಿರುವ ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ.ಕೆ. ಸಂಗಮೇಶ್ವರ್: ನಾನು ರೈಟಿಂಗ್‌ನಲ್ಲಿ ಕೊಟ್ಟಿದ್ದೇನೆ.

ಶ್ರೀ ದಿನೇಶ್ ಗುಂಡೂರಾವ್: ಈಗ ಒಬ್ಬ ಶಾಸಕರಿಗೆ ಅವಮಾನ ಆದರೆ ಇನ್ನೂ ನೋಡುತ್ತೀರಾ?

ಅಧ್ಯಕ್ಷರು: ನಾನು ವರದಿ ತರಿಸಲು ಚರ್ಚೆ ಆದ ದಿವಸವೇ ಹೇಳಿದ್ದೇನೆ. ವರದಿ ಕೊಡಬೇಕೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ: ಯಾವುದು?

ಅಧ್ಯಕ್ಷರು: ಮೊನ್ನೆ ಚರ್ಚೆ ಆಯಿತಲ್ಲ. ಅವತ್ತೇ ವರದಿ ತರಿಸಿ ಎಂದು ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ: ನೀವೇ ಅವತ್ತು ಸಲಹೆ ಕೊಟ್ಟಿದ್ದೀರಿ. ನೀವು ನೊಟಿಸ್ ಕೊಡಿ ಎಂದು ಹೇಳಿದ್ದೀರಿ.

ಅಧ್ಯಕ್ಷರು: ನಾನು ಪತ್ರವನ್ನು ಬರೆದಿದ್ದೇನೆ.

ಶ್ರೀ ಸಿದ್ದರಾಮಯ್ಯ: ಯಾರಿಗೆ ಬರೆದಿದ್ದೀರಿ?

ಅಧ್ಯಕ್ಷರು: ಸಂಬಂಧಪಟ್ಟವರಿಗೆ ವರದಿ ತರಿಸಲು ಪತ್ರ ಬರೆದಿದ್ದೇನೆ, ಮೊನ್ನೆ ಚರ್ಚೆ ಆಯಿತಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಚರ್ಚೆ ಆಗಿರತಕ್ಕದ್ದು ಬೇರೆ. ಇವತ್ತು ಬ್ರೀಚ್ ಆಫ್ ಪ್ರಿವಿಲೇಜ್‌ಗೆ ಬೇರೆಯದ್ದನ್ನು ಕೊಟ್ಟಿದ್ದಾರೆ. ಅವರು ಆವತ್ತು ಪ್ರಸ್ತಾಪ ಮಾಡಿದ್ದು ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರು 16 ದಿವಸಗಳಿಂದ ಚಳುವಳಿ ಮಾಡುತ್ತಿದ್ದಾರೆ. ಅವರಿಗೆ ತುಟ್ಟಿಭತ್ಯೆ ಕೊಟ್ಟಿಲ್ಲ. ಆ ನೌಕರರು ಅವರ ಕ್ಷೇತ್ರದಲ್ಲಿ ಬರುತ್ತಿದ್ದಾರೆ. ಅಲ್ಲಿ 4 ಸಾವಿರ ಖಾಯಂ ನೌಕರರು ಮತ್ತು ಉಳಿದ ನೌಕರರು ಬರುತ್ತಾರೆ. ಇವರು ಮೆನೇಜ್‌ಮೆಂಟ್ ಜೊತೆ ಕೇಳಲು ಹೋದಾಗ ಅವರನ್ನು ಒಳಕ್ಕೆ ಬಿಟ್ಟಿಲ್ಲವೆಂದು ಹೇಳಿದ್ದರು. ನೀವು ಬೇರೆ ರೂಪದಲ್ಲಿ ಕೊಡಿಯೆಂದು ಹೇಳಿದ್ದೀರಿ. ಅದನ್ನು ಅವರು ಕೊಟ್ಟಿದ್ದಾರೆ. ಅಲ್ಲಿರುವ ಎಂ.ಡಿ., ಡಿವೈಎಸ್‌ಪಿ ಮತ್ತು ಇನ್ಸ್‌ಪೆಕ್ಟರ್ 4 hours ಗೇಟನ್ನು ಹಾಕಿಕೊಂಡು ಇವರನ್ನು ಒಳಕ್ಕೆ ಬಿಟ್ಟಿಲ್ಲ. ಆ ಕಾರ್ಖಾನೆ ಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥದ್ದು. ಸರ್ಕಾರದ investment ಇರತಕ್ಕಂಥದ್ದು. ಅವರು ಶಾಸಕರನ್ನೇ ಒಳಕ್ಕೆ ಬಿಡಲಿಲ್ಲವೆಂದರೆ ಅವರು ಯಾರ ಪರವಾಗಿ ಕೆಲಸ ಮಡುತ್ತಿದ್ದಾರೆ. ಇದು ಶಾಸಕರಿಗೆ ಕೊಡತಕ್ಕ ಗೌರವ? ಅಧಿಕಾರಿಗಳು ಶಾಸಕರ ಜೊತೆ ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ನಾವು ಅನೇಕ ಸುತ್ತೋಲೆಗಳನ್ನು ಹೊರಡಿಸಿದ್ದೇವೆ. ಸರ್ಕಾರದ ಇಂಥ ಸುತ್ತೋಲೆಗಳಿಗೆ ಅಧಿಕಾರಿಗಳು ಗೌರವ

ಕೊಡದೆ ಉದ್ಧಟತನದಿಂದ ನಡೆದುಕೊಂಡರೆ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ನೀವು ಅವರಿಗೆ ರಕ್ಷಣೆ ಕೊಡಬೇಕು. ಅವರಿಗೆ ಅವಮಾನವಾಗಿದೆ. ನಾಲ್ಕು ಗಂಟೆಗಳ ಕಾಲ ಅವರನ್ನು ಒಳಕ್ಕೆ ಬಿಟ್ಟಿಲ್ಲ. ಅವರು ಯಾರೇ ಅಧಿಕಾರಿಯಾಗಿರಲಿ ಗೌರವಯುತವಾಗಿ ನಡೆದುಕೊಳ್ಳಬೇಕು. ಅದನ್ನು ಬಿಟ್ಟು ಉದ್ಧಟತನದಿಂದ ನಡೆದುಕೊಂಡರೆ ಅವರಿಗೆ ಸರ್ಕಾರ ರಕ್ಷಣೆ ಕೊಡಬಾರದು, ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಬಹಳ ನೋವಿನಿಂದ ಹೇಳಿಕೊಂಡಿದ್ದಾರೆ. ಅದರ ಬಗ್ಗೆ ಆವತ್ತು ಅವರು ಹೇಳಿದ್ದರು. ನೀವು ಬೇರೆ ರೀತಿಯಲ್ಲಿ ನೋಟಿಸ್ ಕೊಡಿಯೆಂದು ಹೇಳಿದ್ದಿರಿ. ಈಗ ಅವರು ಕೊಟ್ಟಿದ್ದಾರೆ. ಅವರಿಗೆ ಮಾತನಾಡಲು ಅವಕಾಶ ಕೊಡಬೇಕು. ಅದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಬೇಕು.

ಶ್ರೀ ಬಿ.ಕೆ. ಸಂಗಮೇಶ್ವರ್: ನನಗೆ ಆಗಿರುವ ಅವಮಾನಕ್ಕೆ ದಯಮಾಡಿ ನ್ಯಾಯವನ್ನು ಮಾನ್ಯ ಅಧ್ಯಕ್ಷರು ಒದಗಿಸಿ ಕೊಡಬೇಕು. ಆದ್ದರಿಂದ ಇದನ್ನು ದಯಮಾಡಿ ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ಬಗ್ಗೆ ವರದಿ ನೀಡುವಂತೆ ಮೊನ್ನೆ ಪತ್ರ ಬರೆದಿದ್ದೇನೆ. ಏನೂ ಬರದಿದ್ದರೆ ನಾನು ಹಕ್ಕುಚ್ಯುತಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ: There is no point in that. ನೀವು ಹಕ್ಕುಚ್ಯುತಿಗೆ ರೆಫರ್ ಮಾಡಿ. ಹಕ್ಕುಚ್ಯುತಿ ಸಮಿತಿ will look in to it.

ಶ್ರೀ ಎಸ್. ಸುರೇಶ್ ಕುಮಾರ್: ಅವರಿಗೆ ನೋವಾಗಿರುವುದು, ಅವಮಾನವಾಗಿರುವುದು ಇದನ್ನು ಯಾರೂ ಕೂಡ ಸಹಿಸಬಾರದು. ಆದರೆ, ಪ್ರಿವಿಲೇಜ್‌ಗೆ ಬರುತ್ತದೋ ಇಲ್ಲವೋ ಎಂಬುದು ಬಹಳ ಮುಖ್ಯ. ಇದರ ಬಗ್ಗೆ ಈಗಾಗಲೇ ಬಹಳ ವಿಸ್ತೃತವಾಗಿ ಚರ್ಚೆಯಾಗಿದೆ. What is the privilege of a member? His privilege, ಈ ಹೌಸ್‌ನಲ್ಲಿ Speaker ರವರ jurisdiction ಎಲ್ಲೆಲ್ಲಿ ಇದೆಯೋ ಅಲ್ಲಿ extend ಆಗುತ್ತದೆ. It should be taken under some other ground. ಇದು ಪ್ರಿವಿಲೇಜ್‌ಗೆ ಹೇಗೆ ಬರುತ್ತದೆ ವಿರೋಧ ಪಕ್ಷದ ನಾಯಕರೆ? No.

ಶ್ರೀ ಸಿದ್ಧರಾಮಯ್ಯ: ತಾವು ದಯವಿಟ್ಟು ಕುಳಿತುಕೊಳ್ಳಿ. I do not agree with the Law Minister.

SRI S. SURESHKUMAR: Let us disagree, no problem.

SRI SIDDARAMAIAH: No Problem. That is the democracy. ನಾನು ನಿರ್ಭೀತಿಯಿಂದ ಕೆಲಸ ಮಾಡಬೇಕು. ನಮ್ಮ ಕ್ಷೇತ್ರದ ಜನರಿಗ ರಕ್ಷಣೆ ಕೊಡಬೇಕು. ಅವರ ಕ್ಷೇತ್ರದಲ್ಲಿ ಆ ನೌಕರರು ಬರತಕ್ಕದ್ದು. ಮೈಸೂರ್ ಪೇಪರ್ ಮಿಲ್ಸ್ ಫ್ಯಾಕ್ಟರಿ ಬರುವುದು ಅವರ ಕ್ಷೇತ್ರದಲ್ಲಿ. ಆ ಅಧಿಕಾರಿಗಳು ಯಾರ ಕೈಯಲ್ಲಿ ಕೆಲಸ ಮಾಡುತ್ತಿದ್ದಾರೆ? ಅವರಿಗೆ ಸಂಬಳ ಕೊಡುವವರು ಯಾರು? Are they not the Government servants? They are Government servants. They are drawing the salary of the Government. ಶಾಸಕರು ಸರ್ಕಾರಿ ಸ್ವಾಮ್ಯದ ಆ ಪೇಪರ್ ಮಿಲ್ ಒಳಗೆ ಹೋಗುತ್ತೇನೆಂದಾಗ ಬಿಡುವುದಿಲ್ಲವೆಂದರೆ ಏನು? Is it not his privilege to enter into the factory? Is it not the duty of the M.D to receive the MLA with respect and honour? There are so many circulars issued by the Government, how the officers should behave with the MLA. ಆದ್ದರಿಂದ ನೀವು ಆ ರೀತಿಯೆಲ್ಲಾ ಹೇಳುವುದಕ್ಕೆ ಹೋಗಬೇಡಿ. ಆ ರೀತಿಯಾದರೆ ನಾವು ಎಂಎಲ್ಎ ಆಗಿ ಕೆಲಸವನ್ನೇ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿಯಾದರೆ ಯಾವ ಅಧಿಕಾರಿಯೂ ಎಂಎಲ್ಎ ಗಳಿಗೆ ಮೂರು ಕಾಸಿನ ಮರ್ಯಾದೆಯನ್ನು ಕೊಡುವುದಿಲ್ಲ. ಶಾಸಕರು ಕಚೇರಿಗಳಿಗೆ ಹೋದರೆ ಅಧಿಕಾರಿಗಳು ಎದ್ದು ನಿಂತು receive ಮಾಡಿಕೊಳ್ಳಬೇಕೆಂದು ನಾವು ಸುತ್ತೋಲೆಯನ್ನು ಕೊಟ್ಟಿದ್ದೇವೆ. ಎಂಎಲ್ಎ ಗಳು ಬಂದರೆ Principal Secretary ಎದ್ದು ನಿಂತು receive ಮಾಡಿಕೊಂಡು ಕೂರಿಸಬೇಕು ಎಂದು ಇದೆ. ಎಂಎಲ್ಎ ಗಳು officeಗಳಿಗೆ ಹೋದರೆ ಅಧಿಕಾರಿಗಳು ಹೇಗೆ

ಬೇಕಾದರು ನಡೆದುಕೊಳ್ಳಬಹುದೆಂದು ಇದೆಯೇ? That is the protocol. The Government cannot protect the officers.

ಶ್ರೀ ನೆ.ಲ. ನರೇಂದ್ರಬಾಬು: ಅಧಿಕಾರಿಗಳಿಗೆ ಪತ್ರ ಬರೆದರೆ ಎರಡು ತಿಂಗಳಾದರೂ ಉತ್ತರ ಬರೆಯುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಈ ರೀತಿಯಾದರೆ ನಾವು ಗೌರವದಿಂದ ಕೆಲಸ ಮಾಡಲು ಆಗುವುದಿಲ್ಲ. ಜನರು ಓಟು ಕೊಟ್ಟು ನಮ್ಮನ್ನು ಇಲ್ಲಿಗೆ ಕಳುಹಿಸಿರುವುದು ಏಕೆ?

ಒಬ್ಬ ಮಾನ್ಯ ಸದಸ್ಯರು: ಸದನದ ಒಬ್ಬರು ಸದಸ್ಯರಿಗೆ ಮಾಡಿದ ಅವಮಾನ ನಿಮಗೂ ಅವಮಾನ ಮಾಡಿದಂತೆ ಅಲ್ಲವೇ?

ಶ್ರೀ ಎಸ್. ಸುರೇಶ್ ಕುಮಾರ್: ಅವರು ಕಳುಹಿಸಲಿ. ಅದು ಪ್ರಿವಿಲೇಜ್‌ಗೆ ಬರುವುದಿದ್ದರೆ ದಯವಿಟ್ಟು ಪ್ರಿವಿಲೇಜ್‌ಗೆ ಕಳುಹಿಸಲು ಪರಿಶೀಲಿಸಿ.

SRI SIDDARAMAIAH: Mr.Speaker, you please take a decision. I request your goodself to refer the matter to the Privilege Committee.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, kindly refer the matter to the Privilege Committee.

ಅಧ್ಯಕ್ಷರು: ಮೊನ್ನೆ ಇದು ಆದ ತಕ್ಷಣ ಇದರ ಬಗ್ಗೆ ತಕ್ಷಣ ವರದಿ ಕೊಡಬೇಕೆಂದು ನಾನು ಕೈಗಾರಿಕಾ ಸಚಿವರಿಗೆ ಒಂದು ಪತ್ರವನ್ನು ಕೊಟ್ಟೆ. ಅವರ ವರದಿಯನ್ನು ನೋಡಿ ಸಮರ್ಪಕವಲ್ಲದಿದ್ದರೆ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, Please refer the matter to the Privilege Committee. ಅವರನ್ನು ಇಲ್ಲಿ ಕರೆದು ಶಿಕ್ಷೆ ಕೊಡಿ ಎಂದು ನಾವು ಹೇಳಲಿಲ್ಲ. Please refer the matter to the Privilege Committee. Let the Privilege Committee look into the matter and take a decision.

ಅಧ್ಯಕ್ಷರು: ಆಯಿತು. ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಂಗಮೇಶ್ವರ್: ಧನ್ಯವಾದಗಳು.